**<u>ಸಾಕ್ಷಿಯನ್ನು ದಿನಾಂಕ 07.09.2023 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ 1 ನೇ ಆರೋಪಿತರ ಪರ ಎನ್.ಎನ್.ಹೆಚ್., ವಕೀಲರಿಂದ.</u>**

14. ನನ್ನ ವಿರುದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 9 ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುತ್ತವೆ. 7 ಕ್ರಿಮಿನಲ್ ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಇರುತ್ತವೆ. 6 ಪ್ರಕರಣಗಳಲ್ಲಿ ನನ್ನ ವಿರುದ್ದ ನ್ಯಾಯಾಲಯದಿಂದ ಬಾಡಿವಾರೆಂಟ್ ಜಾರಿಯಾಗಿರುತ್ತದೆ. ಈ ಪ್ರಕರಣದಲ್ಲಿ ಈ ಮೊದಲು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುವಂತೆ ಸಮನ್ಸ ಬಂದಿರುತ್ತದೆ. ನೀವು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದು ಪ್ರಶ್ನಿಸಲಾಗಿ, ಸಾಕ್ಷಿ ನನಗೆ ಸಮನ್ಸ ಸರ್ವೀಸ್ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದೋಷಾರೋಪಣೆಯಲ್ಲಿ ತೋರಿಸಿರುವ ನನ್ನ ವಿಳಾಸ ಸರಿಯಾದ ವಿಳಾಸವಾಗಿರುತ್ತದೆ.

15. ಸಮನ್ಸ ನೀಡಲು ಬಂದವರು ಸಂಬಂಧಪಟ್ಟ ಠಾಣೆಯ ಪೊಲೀಸ್ ಅಧಿಕಾರಿ ಆಗಿರುತ್ತಾರೆ. ದೋಷಾರೋಪಣೆಯಲ್ಲಿ ತೋರಿಸಲಾದ ನನ್ನ ವಿಳಾಸದಲ್ಲಿ ನನ್ನ ಕುಟುಂಬದ ಇತರೆ ಸದಸ್ಯರು ಇರುತ್ತಾರೆ. 6 ತಿಂಗಳ ಹಿಂದೆ ನನ್ನ ಮನೆಯ ಬಳಿ 2 ಕಾರಿನಲ್ಲಿ ಬಂದಿದ್ದರು ಎನ್ನಲಾದ ವ್ಯಕ್ತಿಗಳ ಜೊತೆ ಯಾವುದೇ ಮಾತುಕತೆ ಆಗಿರಲಿಲ್ಲ. 2 ಕಾರಿನಲ್ಲಿ ಬಂದಿದ್ದರು ಎನ್ನಲಾದ ವ್ಯಕ್ತಿಗಳು ನನ್ನ ಮನೆಗೆ ಹೋಗಿ ಬೆದರಿಕೆ ಹಾಕಿಲ್ಲ. ನಾನು ನನ್ನ ಮನೆಯವರಿಗೆ ನನಗೆ ಬೆದರಿಕೆ ಇರುವ ಬಗ್ಗೆ ಅವರು ಹೆದರುತ್ತಾರೆ ಎಂದು ತಿಳಿಸಿಲ್ಲ. ನಾನು ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವ ವಿಚಾರವಾಗಿ ಬೆದರಿಕೆ ಇರುವ ಬಗ್ಗೆ ಉಪ್ಪಳ ಪೊಲೀಸರು ಮತ್ತು ಮಂಗಳೂರು ಪೊಲೀಸರ ಬಳಿ ಹೇಳಿರುತ್ತೇನೆ. ಪೊಲೀಸರು ದೂರು ನೀಡುವಂತೆ ನನಗೆ ಸಲಹೆ ನೀಡಿರುತ್ತಾರೆ. ನನಗೆ ಬೆದರಿಕೆ ಇದ್ದ ಬಗ್ಗೆ ದೂರು ನೀಡಲು ತೊಂದರೆ ಇರಲಿಲ್ಲ.

16. ಕಾರಾಗೃಹದ ಅಧಿಕಾರಿಗಳ ಒತ್ತಾಯದ ಮೇರೆಗೆ ಈ ಪ್ರಕರಣದಲ್ಲಿ ಸಾಕ್ಷಿ ಹೇಳದಂತೆ ಆರೋಪಿತರಿಂದ ನನಗೆ ಬೆದರಿಕೆ ಇದೆ ಎಂದು ಮುಖ್ಯವಿಚಾರಣೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಮಹಮ್ಮದ್ ಇಕ್ಬಾಲನ ವಿರುದ್ಧ ನನಗೆ ಮೊದಲಿನಿಂದಲೂ ದ್ವೇಷ ಇತ್ತು ಎಂದರೆ ಸರಿಯಲ್ಲ. ಈ ಪ್ರಕರಣದ 1 ನೇ ಆರೋಪಿ ಮತ್ತು ನನ್ನ ನಡುವೆ ಯಾವುದೇ ಗಲಾಟೆ ಆಗಿಲ್ಲ. 1 ನೇ ಆರೋಪಿಗೆ ನನ್ನ ಮೇಲೆ ಯಾವುದೇ ದ್ವೇಷ ಇರುವುದಿಲ್ಲ. ನಾನು ನನ್ನ ಪೊಲೀಸರ ಮುಂದಿನ ಹೇಳಿಕೆಯಲ್ಲಿ ಜೈಲಿನಲ್ಲಿ ಸಹ ಖೈದಿಗಳಿಗೆ ತೊಂದರೆ ಆಗುತ್ತಿದ್ದ ಬಗ್ಗೆ ಪ್ರತಿಭಟಿಸುತ್ತಿದ್ದರಿಂದ ನನ್ನ ಮೇಲೆ ಸಿಟ್ಟಿತ್ತು ಎಂದು ಹೇಳಿದ್ದೇನೆ. ನನಗೆ 1 ನೇ ಆರೋಪಿಯ ಮೇಲೆ ಸಿಟ್ಟಿತ್ತು ಎಂದರೆ ಸರಿಯಲ್ಲ.

17. ಸೆಲ್ ನ ನೆಲದಿಂದ ಸೂರಿಗೆ 20-25 ಅಡಿ ಎತ್ತರವಿದೆ ಎಂದರೆ ಸರಿಯಲ್ಲ. ಆದರೆ ಎತ್ತರವಿರುತ್ತದೆ ಎಷ್ಟು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಒಬ್ಬ ವ್ಯಕ್ತಿ ಒಂದು ಕೈಯಲ್ಲಿ ಒಂದು ವಸ್ತುವನ್ನು ಹಿಡಿದುಕೊಂಡು ಮತ್ತೊಂದು ಕೈಯನ್ನು ಉಪಯೋಗಿಸಿಕೊಂಡು ಮೇಲೆ ಹತ್ತಲು ಸಾಧ್ಯವಾಗುವುದಿಲ್ಲ. ಮೇಲೆ ಹತ್ತಲು ಬೇರೆ ಯಾವುದಾದರೂ ಸಾಧನದ ಅವಶ್ಯಕತೆ ಇರುತ್ತದೆ ಎಂದರೆ ಸರಿ. ಇಕ್ಬಾಲನ ಕೈಯಲ್ಲಿ ತಲವಾರು ಇತ್ತು ಎಂದು ನಾನು ಪೊಲೀಸರಿಗೆ ಮತ್ತು ನ್ಯಾಯಾಧೀಶರ ಮುಂದೆ ಕಲಂ 164 ರ ಹೇಳಿಕೆ ನೀಡುವಾಗ ಹೇಳಿಲ್ಲ ಎಂದರೆ ಸರಿಯಲ್ಲ.

18. ನಾನು ಸೆಲ್ ನಿಂದ ಹೊರಗೆ ಬರುವ ಮೊದಲೇ ಹೊಡೆದಾಟ ಆಗುತ್ತಿತ್ತು. ನಾನು

ಹೊರಗೆ ಬಂದಾಗ 50 ಕ್ಕೂ ಹೆಚ್ಚು ಖೈದಿಗಳು ವಿಶೇಷ ಬದ್ರತಾ ವಿಬಾಗದ 4 ಮತ್ತು 5 ಸೆಲ್ ಹೊರಗಿನ ಅಂಗಳದಲ್ಲಿ ಇದ್ದರು. ನನಗೆ ಸದರಿ ಗಲಾಟೆಯಲ್ಲಿ ಭಾಗಿಯಾಗಲು ಮನಸ್ಸಿರಲಿಲ್ಲ. ನಾವು ದೂರದಲ್ಲಿ ನಿಂತು ನೋಡುತ್ತಿದ್ದೆವು. ನಾವು ಬಚ್ಚಿಟ್ಟುಕೊಳ್ಳುವ ಪ್ರಯತ್ನದಲ್ಲಿ ಇದ್ದೆವು. ಗಾಯಾಳು ಗಣೇಶ ಶೆಟ್ಟಿಯನ್ನು 4 ನೇ ಸೆಲ್ ನಿಂದ ಜೈಲಿನ ಹೊರಗೆ ಚಿಕಿತ್ಸೆಗಾಗಿ ಯಾರು ಕರೆದುಕೊಂಡು ಹೋದರು ಎಂದು ನಾನು ನೋಡಿಲ್ಲ. ಸಾಕ್ಷಿ ಮುಂದುವರೆದು ನಾವು ಆ ವೇಳೆಗೆ ಬಚ್ಚಿಟ್ಟುಕೊಂಡಿದ್ದೆವು ಎಂದು ನುಡಿಯುತ್ತಾರೆ.

19. ನಾನು ನನ್ನ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆಯಲ್ಲಿ "ಸಾಯಂಕಾಲ ಸುಮಾರು 06.30 ರ ಸಮಯದಲ್ಲಿ ನಘಾಟೆ ರಫೀಕ್, ಮುನೀರ್, ಇರ್ಷದ್, ಇಕ್ಬಾಲ್, ಚಿಕ್ಕ ಇಕ್ಬಾಲ್ ಎಲ್ಲರೂ ಸೇರಿಕೊಂಡು ನಾವು ಇದ್ದ ಸೆಲ್‌ನ ಬಳಿ ಬಂದು ಮಾಡೂರು ಯುಸೂಫ ಮತ್ತು ಗಣೇಶ ಶೆಟ್ಟಿ ಹೋದರು. ಇಲ್ಲಿ ನೋಡಿದ ವಿಚಾರವನ್ನು ಯಾರಿಗಾದರೂ ತಿಳಿಸಿದರೇ ಇವತ್ತು ರಾತ್ರಿಯೇ ನಿಮ್ಮನ್ನು ಮುಗಿಸುತ್ತೇವೆ ಎಂದು ಎಲ್ಲರೂ ನಮಗೆ ಬೆದರಿಕೆ ಹಾಕಿದರು" ಎಂದು ಹೇಳಿಕೆ ನೀಡಿದ್ದೇನೆ. ನಾನು ಆ ದಿನ ರಾತ್ರಿ ಸುಮಾರು 09.30 ರ ಸಮಯದಲ್ಲಿ ನಘಾಟೆ ರಫೀಕ್, ಮುನೀರ್, ಇರ್ಷದ್, ಇಕ್ಬಾಲ್, ಚಿಕ್ಕ ಇಕ್ಬಾಲ್ ಎಲ್ಲರೂ ಸೇರಿಕೊಂಡು ನಮ್ಮನ್ನು ಕೊಂದು ಹಾಕುವ ಬಗ್ಗೆ ಮಾತನಾಡುತ್ತಿದ್ದರು ಎಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ.

20. ನಾನು ಮೇಲಿನ ಹೇಳಿಕೆಗಳನ್ನು ನ್ಯಾಯಾಧೀಶರ ಮುಂದೆ ಪೊಲೀಸರ ಒತ್ತಡದಿಂದ ಮತ್ತು ಈ ಪ್ರಕರಣದ ಆರೋಪಿಗಳ ವಿರುದ್ದ ಪೂರ್ವ ದ್ವೇಷ ಇದ್ದುದ್ದರಿಂದ ಕೊಟ್ಟ ಹೇಳಿಕೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಕಲಂ 164 ರ ಹೇಳಿಕೆಯಲ್ಲಿ ಉಲ್ಲೇಖಿಸಿರುವ

ಸಂಜೆ 06.30 ಗಂಟೆಗೆ ಹಾಗೂ ರಾತ್ರಿ 09.30 ಗಂಟೆಗೆ 1 ನೇ ಆರೋಪಿ ಮಹಮ್ಮದ್ ಇಕ್ಬಾಲ್ ಕಾರಾಗೃಹದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಮಹಮ್ಮದ್ ಇಕ್ಬಾಲನ ಮೇಲೆ ಹಗೆ ಇರುವ ಕಾರಣದಿಂದ 1 ನೇ ಆರೋಪಿ ಕೈಯಲ್ಲಿ ತಲವಾರ್ ಹಿಡಿದುಕೊಂಡಿದ್ದ ಎಂದು ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಸೆಲ್ ನಿಂದ ಹೊರಗೆ ಸೂರಿನ ಮೂಲಕ ಹೊರಗೆ ಹೋದರು ಮತ್ತು 1 ನೇ ಸೆಲ್‌ನ ಬೀಗ ಒಡೆಯಲಾಯಿತು ಎಂದು ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಬ್ಬರ ಮೇಲೆ ಒಬ್ಬರು ನಿಂತು ಸೂರಿನ ಮೂಲಕ ಹೊರಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

21. ನಾನು ಆರೋಪಿಗಳು ಒಬ್ಬರ ಮೇಲೆ ಒಬ್ಬರು ನಿಂತು ಸೂರಿನ ಮೂಲಕ ಹೊರಗೆ ಹೋದ ವಿಚಾರವನ್ನು ನನ್ನ ಪೋಲೀಸರ ಮುಂದಿನ ಹೇಳಿಕೆ ಮತ್ತು ಕಲಂ 164 ರ ಹೇಳಿಕೆಯಲ್ಲಿ ನಮೂದಿಸಿರುತ್ತೇನೆ. ನಾನು ಈ ವಿಚಾರವನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಕಾರಾಗೃಹದಲ್ಲಿ ಬಂಧಿಯಾಗಿರುವ ಕಾರಣ ಕಾರಾಗೃಹದ ಅಧಿಕಾರಿಗಳು ಹಾಗೂ ಪ್ರಕರಣದ ಪೊಲೀಸ್ ಅಧಿಕಾರಿಗಳು ಹೇಳಿಕೊಟ್ಟಂತೆ ಮುಖ್ಯವಿಚಾರಣೆಯಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ಒಬ್ಬ ಮುಸ್ಲೀಮ್ ಗೆ ಇಬ್ಬರು ಹಿಂದೂಗಳು ಬೇಕು ಎಂದು ಹೇಳಿ ಆನಂದನನ್ನು ಹಲ್ಲೆ ಮಾಡಲು ಕರೆದುಕೊಂಡು ಹೋದ ವಿಚಾರ ಕಾರಾಗೃಹದ ಅಧಿಕಾರಿಗಳ ಕುಮ್ಮಕ್ಕಿನ ಮೇರೆಗೆ ಸೃಷ್ಟಿ ಮಾಡಿಕೊಂಡ ವಿಚಾರ ಆಗಿರುತ್ತದೆ ಎಂದರೆ ಸರಿಯಲ್ಲ.

22. ನಾನು ನಿಪಿ-11 ರಂತೆ ಕಲಂ 164 ರ ಹೇಳಿಕೆಯನ್ನು ಕಾರಾಗೃಹದಲ್ಲಿ

ಖೈದಿಯಾಗಿದ್ದ ಕಾರಣ ಕಾರಾಗೃಹದ ಅಧಿಕಾರಿಗಳ ಒತ್ತಾಯದ ಮೇರೆಗೆ ಹೇಳಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಆನಂದನನ್ನು ಆರೋಪಿಗಳು ಹಲ್ಲೆ ಮಾಡಲು ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನೈಜ ಘಟನೆಯನ್ನು ಮುಚ್ಚಿ ಹಾಕಲು ಆನಂದನ ಘಟನೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆ ದಿನ ಕಾರಾಗೃಹದ ಅಧಿಕಾರಿಗಳು ಕ್ವಾರಂಟೈನ್ ಮತ್ತು ವಿಶೇಷ ಬದ್ರತಾ ವಿಭಾಗದ ಬೀಗಗಳನ್ನು ತೆಗೆದಿದ್ದರು ಎಂದು ಪ್ರಶ್ನಿಸಲಾಗಿ, ಸಾಕ್ಷಿ ವಿಶೇಷ ಬದ್ರತಾ ವಿಭಾಗದ 1 ಮತ್ತು 2 ನೇ ಸೆಲ್ ಗಳು ಲಾಕ್ ಆಗಿದ್ದವು ಎಂದು ನುಡಿಯುತ್ತಾರೆ. ಕ್ವಾರಂಟೈನ್ ವಿಭಾಗದ ಸೆಲ್ ಗಳು ಸಹ ಬಂದ್ ಆಗಿದ್ದವು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವರು ಹಾರಿಕೊಂಡು ಬಂದಿದ್ದು ಎಂದು ನುಡಿಯುತ್ತಾರೆ.

23. 2015 ರಲ್ಲಿ ಕಾರಾಗೃಹದ ಅಧೀಕ್ಷಕರಾಗಿದ್ದವರೇ ಈಗಲೂ ಸಹ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನನಗೆ ಕಾರಾಗೃಹದಲ್ಲಿ ವಿಚಾರಣಾದಿನ ಖೈದಿಯಾಗಿ ಬಂಧಿಯಾಗಿರುವ ಪ್ರಕರಣದಲ್ಲಿ ನ್ಯಾಯಾಲಯದಿಂದ ಜಾಮೀನು ದೊರೆತಿರುವುದಿಲ್ಲ. ನಾನು 2015 ರಿಂದ ಇಲ್ಲಿಯವರೆಗೆ ಸುಮಾರು ಮೂರು ಬಾರಿ ಮಂಗಳೂರು ಕಾರಾಗೃಹದಲ್ಲಿ ವಿಚಾರಣಾದಿನ ಖೈದಿಯಾಗಿ ಹೋಗಿರುತ್ತೇನೆ. ಕಾರಾಗೃಹದ ಅಧಿಕಾರಿಗಳು ಮತ್ತು ಪೊಲೀಸರು ಅವರು ಹೇಳಿದಂತೆ ಸಾಕ್ಷಿ ನುಡಿಯದಿದ್ದರೇ ಕಾರಾಗೃಹದಲ್ಲಿ ನನ್ನ ಜೀವನ ದುಸ್ತರವಾಗುತ್ತದೆ ಎಂದು ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ.

24. ನನಗೆ ಹೃದಯಸಂಬಂಧಿ ಕಾಯಿಲೆ ಮತ್ತು ಸಕ್ಕರೆ ಕಾಯಿಲೆ ಇರುತ್ತದೆ. ನಾನು

ನಿಯಮಿತವಾಗಿ ಆಹಾರ ಸೇವಿಸಬೇಕಾಗುತ್ತದೆ. ಕಾರಾಗೃಹದ ಅಧಿಕಾರಿಗಳು ಹೇಳಿದಂತೆ ಸಾಕ್ಷ್ಯ ನೀಡದಿದ್ದಲ್ಲಿ ನನಗೆ ಒದಗಿಸುವ ಊಟ ತಿಂಡಿಯಲ್ಲಿ ವ್ಯತ್ಯಯ ಆಗುವ ಸಂಭವವಿರುವುದರಿಂದ ನಾನು ಅವರ ಒತ್ತಾಯದ ಮೇರೆಗೆ ಮುಖ್ಯವಿಚಾರಣೆಯಂತೆ ಸಾಕ್ಷ್ಯ ನೀಡಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಹಾಗೂ 1 ನೇ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 8 ಮತ್ತು 12 ನೇ ಆರೋಪಿತನ ಪರ ಶ್ರೀ ಟಿ.ಆರ್.ಎಸ್. ವಕೀಲರಿಂದ.**

25. ನಾನು 2015 ರಲ್ಲಿ ಮಂಗಳೂರು ಜೈಲಿಗೆ ಬರುವ ಪೂರ್ವದಲ್ಲಿ ಕಾಸರಗೋಡು ಜೈಲಿನಲ್ಲಿ ಒಂದು ತಿಂಗಳ ಕಾಲ ಇದ್ದೆ. ನಾನು ಕಾಸರಗೋಡು ಜೈಲಿನಲ್ಲಿದ್ದಾಗ ಸಹ ಖೈದಿಗಳಿಗೆ ತೊಂದರೆ ನೀಡಿ, ಅವರಿಗೆ ಡಾನ್‌ನಂತೆ ವರ್ತಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಮಂಗಳೂರು ಜೈಲಿನಲ್ಲಿಯೂ ಸಹ ಅದೇ ಪ್ರವೃತ್ತಿಯನ್ನು ಮುಂದುವರೆಸಿದ್ದೆ ಎಂದರೆ ಸರಿಯಲ್ಲ. ಆದ ಕಾರಣ ಸಹ ಖೈದಿಗಳು ನನ್ನನ್ನು ದ್ವೇಷಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನನ್ನು ವಿರೋಧಿಸಿದವರ ವಿರುದ್ದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಘಟನೆ ನೋಡಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಉಳಿದ ಎಲ್ಲ ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದ.**

ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**<u>ಪಾಟೀಸವಾಲುಃ 10 ಮತ್ತು 11 ನೇ ಆರೋಪಿತರ ಪರ ಶ್ರೀ ವೈ.ವಿ.ಹೆಚ್. ವಕೀಲರಿಂದ.</u>**

ಪಾಟೀಸವಾಲು ಇಲ್ಲ ಎಂದುನುಡಿದಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.